೧೯೮೭ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ. ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ, ಆಹಾರ ಮತ್ತು ನಗರಾಭಿವೃದ್ಧಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇವೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಈ ಮನರಂಜನಾ ತಿದ್ದುಪಡಿ ಮಸೂದೆಯಲ್ಲಿ ಸಾಮಾನ್ಯವಾಗಿ ಮುಖ್ಯಮಂತ್ರಿಯವರು ತಮ್ಮ ಆಯವ್ಯಯದ ಭಾಷಣದಲ್ಲಿ ಸೂಚಿಸಿರತಕ್ಕ ತೆರಿಗೆಯ ವಿಷಯಗಳನ್ನು ಪ್ರಸ್ತಾಪ ಮಾಡಿರುವುದಕ್ಕೆ ಅನುಗುಣವಾಗಿ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ. ಇದರಲ್ಲಿ ಮುಖ್ಯವಾಗಿ ರೇಟ್ ಆಫ್ ಟ್ಯಾಕ್ಸ್ ಸ್ವಲ್ಪ ಜಾಸ್ತಿಯಾಗಿದೆಯೆಂದು ಷೆಡ್ಯೂಲ್‌ನಲ್ಲಿ ಕೊಟ್ಟಿದ್ದೇವೆ. ವಿಡಿಯೋ ಇಟ್ಟುಕೊಂಡಿರುವವರು ಒಂದು ಸಾವಿರದಿಂದ, ಎರಡೂವರೆ ಸಾವಿರ ರೂಪಾಯಿಗಳವರೆಗೆ ಕೊಡಬೇಕೆಂಬುದು ಇದರಲ್ಲಿ ಇದೆ ಮಾನ್ಯ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ವಂನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಈ ಚಲನಚಿತ್ರ ಉದ್ಯಮಕ್ಕೆ ಸಂಬಂಧಪಟ್ಟಂತೆ, ಈ ತೆರಿಗೆಯ ವಿಚಾರವನ್ನು ಈಗಾಗಲೇ ನಾವು ಪ್ರಸ್ತಾವಿಕವಾಗಿ ಮಾತನಾಡಿದ್ದೇವೆ ; ಬೇರೆ ವಿಶೇಷವಾದಂಥ ಕೆಲವು ವಿಚಾರಗಳು ಇದ್ದುದರಿಂದ ವಿವರವಾಗಿ ಮಾತನಾಡುವುದಕ್ಕೆ ಆಗಲಿಲ್ಲ. ಆದರೆ ಚಲನಚಿತ್ರ ಉದ್ಯಮದ ಮೇಲೆ ಸರ್ಕಾರದ ಕಣ್ಣು ಏಕೆ ಹೋಯಿತೆಂದಬುದು ನನಗೆ ಅರ್ಥವಾಗುತ್ತಿಲ್ಲ. ಯಾವುದೇ ಟ್ಯಾಕ್ಸೇಷನ್ ಮಾಡುವಾಗ, ಆ ಉದ್ಯಮಕ್ಕೆ ಅದನ್ನು ಭರಿಸತಕ್ಕಂಥ ಶಕ್ತಿ ಇರಬೇಕು. ಈಗ ಪರಿಸ್ಥಿತಿ ಏನಾಗಿದೆ ಅಧ್ಯಕ್ಷರೇ, ತಾವೂ ನೋಡಿದ್ದೀರಿ. ಚಲನಚಿತ್ರ ಉದ್ಯಮ ಅದರಲ್ಲೂ ಕನ್ನಡ ಚಲನಚಿತ್ರ ಉದ್ಯಮ ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ಇದಕ್ಕೆ ಅನೇಕ ಕಾರಣಗಳು ಇವೆ. ಮುಖ್ಯವಾಗಿ ಬೆಂಗಳೂರಿನಲ್ಲಿದ್ದಷ್ಟು ಫಿಲಂ ಥಿಯೇಟರ್ಸ್, ಬೇರೆ ಯಾವ ಕಡೆಯೂ ಇಲ್ಲ. ಈಗ ಆ ಫಿಲಂ ಥಿಯೇಟರುಗಳನ್ನು ಹೊಡೆಯುತ್ತಿದ್ದಾರೆ. ಹೊಡೆದು ಷಾಪಿಂಗ್ ಕಾಂಪ್ಲೆಕ್ಸ್ ಮಾಡುತ್ತಿದ್ದಾರೆ, ಯಾರೂ ಇದನ್ನು ತಡೆಯುತ್ತಾ ಇಲ್ಲ. ನಾವು ಅಧಿಕಾರದಲ್ಲಿರುವಾಗ ಸಿನಿಮಾ ಥಿಯೇಟರ್ ಹೊಡೆಯಂತ್ತಾರೆ ಎಂದು ಹೇಳಿದರೆ, ಮಾನ್ಯ ನಾರಾಯಣಸ್ವಾಮಿಯವರು ಚಳುವಳಿ ಮಾಡುತ್ತಿದ್ದರು. ಈಗ ಆ ಚಳುವಳಿಯ ಕಾವು ಎಲ್ಲಿ ಹೋಗುತ್ತಿದೆ. ಕನ್ನಡ ಚಳುವಳಿಯ ಕಾವು ಬರೀ ವಿಧಾನಸೌಧದೊಳಗೆ ಮಾತ್ರ ಕಾಣುತ್ತದೆ.....

ಶ್ರೀ ಹೆಚ್. ಜಿ. ಚನ್ನಪ್ಪ.—ವಿಧಾನ ಸೌಧದ ಹೊರಗೂ ಇದೆ. ನಿಮ್ಮ ಕಾಲದಲ್ಲಿ ಟಿ.ವಿ.ಗಳು ಇರಲಿಲ್ಲ. ಈಗ ಪ್ರತಿಯೊಂದು ಹಳ್ಳಿಯಲ್ಲಿಯೂ ಟಿ.ವಿ.ಗಳು ಇರುವುದರಿಂದ, ಥಿಯೇಟರ್‌ಗಳಿಗೆ ಕಲೆಕ್ಷನ್ ಕಡಿಮೆಯಾಗಿದೆ.....

ಶ್ರೀ ಎಂ. ವೀರಪ್ಪಮೊಯಿಲಿ.—ಟಿ.ವಿ. ನೋಡುವವರೂ ಇರುತ್ತಾರೆ. ಆದರೆ ಕಲೆಕ್ಷನ್ ಕಡಿಮೆಯಾಗಿದೆ ಅದರಿಂದ ಥಿಯೇಟರ್‌ಗಳನ್ನು ಹೊಡೆಯುತ್ತಾರೆ ಎಂದು ಹೇಳುವ ಬಗ್ಗೆ ಈಗ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಷಾಪಿಂಗ್ ಕಾಂಪ್ಲೆಕ್ಸ್ ಮಾಡಿದರೆ, ಮತ್ತಷ್ಟು ಲಾಭದಾಯಕವಾಗುತ್ತದೆ ಎಂದು ಒಂದು ಕಾರಣ ವಿರಬಹುದು. ಟಿ.ವಿ. ಬಂದಿರುವುದರಿಂದ ಅಲ್ಲ. ಇದರ ಬಗ್ಗೆ ತಾವು ಸರ್ಕಾರದಿಂದ ಅಂಕಿಸಂಖ್ಯೆ ತರಿಸಿ. ಇಲ್ಲಿ ನಾವು ಇದಕ್ಕೆ ಪ್ರೋತ್ಸಾಹ ಕೊಡುವುದು ಬೇಡ. ನಾವು ಸದನದಲ್ಲಿ ಕುಳಿತುಕೊಂಡು ಇದಕ್ಕೆ ಪ್ರೋತ್ಸಾಹ ಕೊಡುವುದು ಬೇಡ. ದಯವಿಟ್ಟು ತರಿಸಿ. ರೇಟ್ ಆಫ್ ಗ್ರೋತ್ ಕಡಿಮೆ ಆಗಿಲ್ಲ. ಸ್ವಲ್ಪ ಅಂಶ ಟಿ.ವಿ. ಹಾವಳಿಯಿಂದ ಇರಬಹುದು. ಆದರೆ ಬಡವರು ಟಿ.ವಿ. ನೋಡುವುದಕ್ಕೆ ಎಲ್ಲಿ ಹೋಗುತ್ತಾರೆ ? ಜನತಾಮಾನ್ಯರು ಯಾರು ಇರುತ್ತಾರೆ, ಇನ್ನೂ ಕೂಡ ಅವರು ಸಿನಿಮಾ ಥಿಯೇಟರನ್ನೇ ಇದರೂ ನಂಬಿಕೊಂಡಿರುತ್ತಾರೆ.

ಈಗ ಸಿನಿಮಾ ಥಿಯೇಟರುಗಳನ್ನು ಹೊಡೆದು ಹಾಕತಕ್ಕಂಥ ಪರಿಸ್ಥಿತಿ ಇರುವಾಗ ಕನ್ನಡ ಸಿನಿಮಾ ಉದ್ಯಮವೇ ಸಂಪೂರ್ಣವಾಗಿ ನಶಿಸಿ ಹೋಗತಕ್ಕಂಥ ಪರಿಸ್ಥಿತಿ ಇರುವಾಗ ಇಷ್ಟು ದೊಡ್ಡ ಗಾತ್ರದ ತೆರಿಗೆಯನ್ನು ತಾವು ಹಾಕಿದರೆ ಹೇಗೆ ? ಕೋಳಿ ತಕ್ಷಿ ಕೊಡುತ್ತದೆ, ಬಹಳ ರುಚಿಯಾಗಿರುತ್ತದೆಂದು ಒಮ್ಮೆಲೇ ತಿಂದು ಬಿಡೋಣ ಎಂದು ಕೋಳಿ ಕೊಯ್ಯುವಂಥ ದೊಡ್ಡ ಪ್ರಯತ್ನವನ್ನು ಸರ್ಕಾರ ಮಾಡಿದೆ ಕೇರಳ, ಗುಜರಾತ್, ಪಶ್ಚಿಮ ಬಂಗಾಳ, ತಮಿಳುನಾಡು ರಾಜ್ಯದಲ್ಲಿ ಕೂಡ ಸ್ವಲ್ಪ ಮಟ್ಟಿಗೆ ಈ ಉದ್ಯಮದ ಮೇಲೆ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಮಂತ್ರಿಗಳ ಹತ್ತಿರ ನಿಯೋಗ ಹೋದಾಗ ಕನ್ನಡ ಚಲನ ಚಿತ್ರಗಳ ಮೇಲಿನ ತೆರಿಗೆಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ವಿಧಾನ ಸೌಧದಲ್ಲಿ ಹೇಳಬೇಕು. ನಿಮಗೆ ಹೇಳಿರುವುದು ಲಿಪ್ ಸಿಂಪತಿ ಮಾತ್ರ. ಮಾನ್ಯ ನಾರಾಯಣ ಕುಮಾರ್ ಅವರನ್ನು ಸಂತೋಷ ಪಡಿಸುವುದಕ್ಕೆ ಮಾತ್ರ ಇದು ಸೀಮಿತವಾದದ್ದು. ಕನ್ನಡ ಚಲನಚಿತ್ರ ಉದ್ಯಮಕ್ಕೆ ಅನುಕೂಲವಾಗಲಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.— ಸರ್ಕಾರ ಸುಳ್ಳು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕನ್ನಡ ಚಲನಚಿತ್ರ ಉದ್ಯಮಕ್ಕೆ ದೊಡ್ಡ ಆಘಾತವಾಗಿದೆ ಇಷ್ಟೆಲ್ಲಾ ಟ್ಯಾಕ್ಸ್ ಹಾಕಿದರೂ ವಸೂಲಿ ಮಾತ್ರ ಸರಿಯಾಗಿ ಆಗುತ್ತಿಲ್ಲ. ಹಾಲಿ ಇರತಕ್ಕ ಕಾನೂನು ಅಡಿಯಲ್ಲಿಯೇ ವಸೂಲು ಮಾಡುವುದಕ್ಕೆ ಅವಕಾಶ ಇದ್ದರೂ ಕೂಡ, ವಸೂಲಿಯನ್ನು ಸರಿಯಾಗಿ ಮಾಡಿರುವುದಿಲ್ಲ. ಕೆಲವು ಥಿಯೇಟರುಗಳ ಮಾಲೀಕರು ಪ್ರಭಾವ ಬೀರುತ್ತಾರೆ. ಪ್ರಾಮಾಣಿಕವಾಗಿ ಈ ಉದ್ಯಮವನ್ನು ನಡೆಸುವುದಕ್ಕಾಗುವುದಿಲ್ಲ, ತಮ್ಮ ಗ್ರೋತ್ ರೇಟ್ ಹೋದಿದರೆ, ವರ್ಷ ಈ ತೆರಿಗೆ ವಸೂಲಿ ಇಳಿವಂಥಿವಾಗುತ್ತಾ, ಹೋಗಿರುವುದನ್ನು ಕಾಣಬಹುದು, ಇದು ತೆರಿಗೆಗಳನ್ನು ಪ್ರಾಮಾಣಿಕವಾಗಿ ವಸೂಲು ಮಾಡಿದ್ದರೆ ಹೆಚ್ಚು ಆದಾಯ ಬರುತ್ತಿತ್ತು. ಅದನ್ನು ಮಾಡದೆ, ಈ ಒಂದು ಉದ್ಯಮಕ್ಕೆ ಕೊಡಲಿ ಏಟು ಹಾಕತಕ್ಕ ಪ್ರಯತ್ನವನ್ನು ಸರ್ಕಾರ ಮಾಡಿದೆ. ನಮ್ಮ ಸರ್ಕಾರ ಇರುವಾಗ ೮೨-೮೩ರಲ್ಲಿ, ಚಲನಚಿತ್ರ ಉದ್ಯಮಕ್ಕೆ ರಿಯಾಯಿತಿ ಕೊಡಲಾಗಿತ್ತು, ಆದನ್ನು ಸಂವರ್ಣಯುಗ ಎಂದು ಹೇಳಿದರೂ ಅತಿಶಯೋಕ್ತಿ ಅಲ್ಲ. ೫೦ ಪರ್ಸೆಂಟ್, ೧೦೦ ಪರ್ಸೆಂಟ್ ರಿಯಾಯಿತಿ ಕೊಡಲಾಗಿತ್ತು. ಆದರೂ ನಮ್ಮ ಟ್ಯಾಕ್ಸ್ ಗ್ರೋತ್ ರೇಟ್ ೨೧.೭ ಪರ್ಸೆಂಟ್ ಇತ್ತು ಆದರೆ, ೮೩-೮೪ರಲ್ಲಿ ನಮ್ಮ ಸರ್ಕಾರ ನಿಮ್ಮ ಕೈಗೆ ಬಂದ ಮೇಲೆ ಗ್ರೋತ್ ರೇಟ್ ೭.೬ ಪರ್ಸೆಂಟ್‌ಗೆ ಇಳಿಯಿತು, ನೀವು ಹೊಸದಾಗಿ ರಿಯಾಯಿತಿ ಯಾವುದಕ್ಕೂ ಕೊಟ್ಟಿಲ್ಲ. ೮೪-೮೫ರಲ್ಲಿ ಗ್ರೋತ್ ರೇಟ್ ೬.೯ ಪರ್ಸೆಂಟ್‌ಗೆ ಇಳಿಯಿತು. ರಿಯಾಯಿತಿ ಕೊಟ್ಟಿಲ್ಲ. ೮೫-೮೬ರಲ್ಲಿ ೧೧.೧ ಪರ್ಸೆಂಟ್ ಏರಿದರೂ ಕೂಡ ಕಡಿಮೆಯಾಗಿದೆ. ಫೆಬ್ರುವರಿ ೮೭ರಲ್ಲಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನ ಗ್ರೋತ್‌ರೇಟ್ ೫.೫ ಪರ್ಸೆಂಟ್‌ಗೆ ಇಳಿದಿದೆ. ೫.೫ ಪರ್ಸೆಂಟ್‌ಗೆ ಗ್ರೋತ್‌ರೇಟ್ ಹೋದರೆ ನಮಗೆ ಯಾವ ರೀತಿಯಲ್ಲಿ ಉತ್ಪಾದನೆ ಬರಬೇಕು. ತಾವು ತೆರಿಗೆಯನ್ನು ವಸೂಲು ಮಾಡತಕ್ಕಂಥ ರೀತಿಯಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ತಾವು ಮಾಡಿಲ್ಲ. ತೆರಿಗೆಯಿಂದ ತಪ್ಪಿಸಿಕೊಳ್ಳತಕ್ಕಂಥವರಿಗೆ ತಾವು ಸಾಕಷ್ಟು ಪ್ರೋತ್ಸಾಹವನ್ನು ಕೊಡತಕ್ಕಂಥಾದ್ದಕ್ಕೆ ತಾವು ಅಣುವು ಮಾಡಿಕೊಟ್ಟಿದ್ದೀರಿ. ಈ ತೆರಿಗೆ ನೀತಿಯಿಂದ ಕನ್ನಡ ಚಲನ ಚಿತ್ರೋದ್ಯಮವನ್ನು ಸೆದೆ ಬಡಿಯತಕ್ಕಂಥ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ಈ ಚಲನ ಚಿತ್ರೋದ್ಯಮದ ಮೇಲೆ ನಿಮ್ಮ ಸರ್ಕಾರಕ್ಕೆ ಏತಕ್ಕೆ ಇಷ್ಟೊಂದು ದ್ವೇಷ ? ಈ ಉದ್ಯಮದಲ್ಲಿ ಗ್ರೋತ್ ರೇಟ್ ೫.೫ ಪರ್ಸೆಂಟ್ ಇದೆ. ನಿಮ್ಮ ಕಾಲದಲ್ಲಿ ಇಷ್ಟು ಕಡಿಮೆಯಾಗಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ ನಾನು ಮೊದಲೇ ಹೇಳಿದ ಹಾಗೆ ನಿಜವಾಗಿಯೂ ನಿಮಗೆ ಕನ್ನಡ ಸಂಸ್ಕೃತಿಯ ಮೇಲೆ ಕನ್ನಡದ ಅಭಿವೃದ್ಧಿಯ ಮೇಲೆ ಅಭಿಮಾನವಿದ್ದರೆ ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಲನಚಿತ್ರೋದ್ಯಮಕ್ಕೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಈ ಕರ್ನಾಟಕ ರಾಜ್ಯದಲ್ಲಿ ಕನ್ನಡ ಸಂಸ್ಕೃತಿಯಂ ಉನ್ನತಿಗಾಗಿ ಶ್ರಮಿಸಿದಂತಹ ಕಾಲ ಒಂದು ಇತ್ತು, ಆ ಪರಿಸ್ಥಿತಿ ಈಗ ಇಲ್ಲ. ನಿಮ್ಮ ನೀತಿಯ ಬಗ್ಗೆ ನಿಮ್ಮ ತೆರಿಗೆ ನೀತಿಯ ಬಗ್ಗೆ ಈ ಕನ್ನಡದ ಅಭಿವೃದ್ಧಿಗೆ ಕೊಡಲಿಪೆಟ್ಟು ಹಾಕಿದ್ದೀರಿ. ಆದ್ದರಿಂದ ದಯವಮಾಡಿ ಈ ಮುಸುಡಿಯನ್ನು ತಾವು ಹಿಂದಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು, ನೀವು ಎಲ್ಲಿ ಯಾರಿಗೆ ತೆರಿಗೆಯನ್ನು ಹಾಕಿ ವಸೂಲಿ ಮಾಡಬೇಕೋ ಅಲ್ಲಿ ತೆರಿಗೆಯನ್ನು ಹಾಕಿ ವಸೂಲಿ ಮಾಡುತ್ತಿಲ್ಲ. ತಾವು ಬೇರೆ ಮೂಲಗಳಿಂದ ತೆರಿಗೆಯನ್ನು ವಸೂಲಿ ಮಾಡುತ್ತೇವೆ ಎಂದು ಮುಸುಡಿಯನ್ನು ತಂದರೆ ಆಗ

ನಾವು ಸ್ವಾಗತ ಮಾಡುತ್ತೇವೆ, ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ನಮ್ಮ ಯಾರದೂ ಅಭ್ಯಂತರವಿಲ್ಲವೆಂದು ಹೇಳಿ ಇಷ್ಟು ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್(ರಾಜಾಜಿನಗರ).— ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳೆ ವಂಡಿಸಿರತಕ್ಕಂಥ ಮಸೂದೆಯಲ್ಲಿ ಅಘಾಧವಾದಂಥ ಸರ್‌ಚಾರ್ಜನ್ನು ಹಾಕಿದ್ದಾರೆ. ಒಂದು ರೂಪಾಯಿ ಇಪ್ಪತ್ತೈದು ಪೈಸೆ ೩೫ ಪರ್ಸೆಂಟನಷ್ಟು ಜಾಸ್ತಿ ಮಾಡಿದ್ದಾರೆ. ಅದರೆ ಇಲ್ಲಿ ನೂರಕ್ಕೆ ನೂರರಷ್ಟು ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ ಅದೇ ರೀತಿಯಲ್ಲಿ ೪೫ ಪರ್ಸೆಂಟ್ ಇದ್ದ ಸರ್‌ಚಾರ್ಜ್‌ಗೆ ಇನ್ನು ೪೫ ಪರ್ಸೆಂಟ್ ಜಾಸ್ತಿ ಮಾಡಿ ಒಟ್ಟು ೯೦ ಪರ್ಸೆಂಟ್ ಆಗುತ್ತದೆ. ೨-೫೦ ಪೈಸೆ ಇದ್ದದನ್ನು ೫೫ ಪರ್ಸೆಂಟ್‌ಗೆ ಜಾಸ್ತಿ ಮಾಡಿದ್ದಾರೆ. ಒಟ್ಟು ಪರ್ಸೆಂಟೇಜ್ ನೋಡಿದರೆ ೧೦೦ ಪರ್ಸೆಂಟ್ ಆಗುತ್ತದೆ. ಅವರು ತಂದಿರತಕ್ಕಂಥ ಮಸೂದೆಯಲ್ಲಿ ಹೇಳಿರುವಂತೆ ವೀಡಿಯೋ ಶೋಗಳಿಗೆ ಒಂದು ಸಾವಿರ ರೂಪಾಯಿಗಳಿಂದ ೨೫೦೦ ರೂಪಾಯಿಗಳಿಗೆ ಹೆಚ್ಚು ಮಾಡಿದ್ದಾರೆ. ಇದಕ್ಕೆ ಯಾವ ಕಾರಣವನ್ನು ಸಹ ಕೊಟ್ಟಿಲ್ಲ. ಇವರು ಬಜೆಟ್‌ನಲ್ಲಿ ಟ್ಯಾಕ್ಸ್ ಜಾಸ್ತಿ ಮಾಡುತ್ತೇವೆಂದು ಹೇಳಿದ್ದಾರೆ ಅದಕ್ಕೆ ಟ್ಯಾಕ್ಸ್ ಜಾಸ್ತಿ ಮಾಡಂತ್ತೇವೆ ಎನ್ನುವ ಅರ್ಥದಲ್ಲಿ ಇವರು ಟ್ಯಾಕ್ಸ್ ಹಾಕಿದ್ದಾರೆ, ಇವರು ಕೊಟ್ಟಿರುವ ಮಸೂದೆಯ ಅಬ್ಜೆಕ್ಟ್ ಅಂಡ್ ರೀಜನ್ಸ್‌ನಲ್ಲಿ ಇದರ ಬಗ್ಗೆ ಎನನ್ನೂ ಹೇಳಿಲ್ಲ. ಟ್ಯಾಕ್ಸ್ ಜಾಸ್ತಿ ಮಾಡಬೇಕು ಜಾಸ್ತಿ ಮಾಡಿದ್ದೇವೆ. ಎನ್ನುವ ಅರ್ಥದಲ್ಲಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಕರ್ನಾಟಕ ರಾಜ್ಯದ ಚಲನಚಿತ್ರೋದ್ಯಮಕ್ಕೆ ಧಕ್ಕೆ ಬರುತ್ತದೆ. ಈ ಕನ್ನಡ ಚಲನಚಿತ್ರೋದ್ಯಮದ ಮೇಲೆ ತೆರಿಗೆಯನ್ನು ಜಾಸ್ತಿ ಹಾಕಬೇಕೆಂದು ಸರ್ಕಾರ ಹೊರಟಾಗ ತಮಗೆಲ್ಲರಿಗೆ ತಿಳಿದಿರುವಂತೆ ಈ ಚಲನಚಿತ್ರೋದ್ಯಮದ ಅಧ್ಯಕ್ಷರು, ಡಾಕ್ಟರ್ ರಾಜಕುಮಾರ್‌ರವರು ನಿಮ್ಮ ಪಕ್ಷದ ಹಿತೈಷಿಗಳಾದ ಶ್ರೀ ಪಾನ್ ಶಂಕರ್‌ನಾಗ್ ಮತ್ತು ಅನಂತನಾಗ್ ಅವರೆಲ್ಲರೂ ಈ ನೀತಿ ಸರಿಯಾಗಿಲ್ಲವೆಂದು ಹೇಳಿದ್ದರು ಅಷ್ಟೇ ಅಲ್ಲ ಇದರಿಂದ ಕರ್ನಾಟಕ ರಾಜ್ಯದ ಚಿತ್ರೋದ್ಯಮಕ್ಕೆ ಆತಂಕವಾಗುತ್ತದೆ. ಇದೇ ತೆರಿಗೆಯನ್ನು ತಾವು ಮುಂದುವರಿಸುವುದಾದರೆ ಚಿತ್ರೋದ್ಯಮವನ್ನು ನಡೆಸುವುದೇ ಕಷ್ಟವಾಗುತ್ತದೆ. ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಚಲನಚಿತ್ರೋದ್ಯಮದ ಪ್ರೊಡ್ಯೂಸರ್ಸ್ ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಸಹ ಭೇಟಿಯಾಗಿದ್ದರು, ಆದ್ದರಿಂದ ಸನ್ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಬೇಕು. ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಲನಚಿತ್ರೋದ್ಯಮಕ್ಕೆ ಈ ಪರಿಸ್ಥಿತಿ ಬರಬಾರದು.

ಬೆಂಗಳೂರಿನಲ್ಲಿ ಇವತ್ತಿನ ದಿವಸ ಅನೇಕ ಚಿತ್ರಮಂದಿರಗಳನ್ನು ಒಡೆದು ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳನ್ನು ಕಟ್ಟಿಸುತ್ತಿದ್ದಾರೆ. ನೀವು ಹೊರಿಸುವ ಟ್ಯಾಕ್ಸನ್ನು ಕೊಡುವುದಕ್ಕಾಗದೇ ಚಿತ್ರಮಂದಿರಗಳನ್ನು ಒಡೆಯುವ ಪರಿಸ್ಥಿತಿಗೆ ಇವತ್ತಿನ ದಿನ ಚಿತ್ರಮಂದಿರಗಳ ಮಾಲೀಕರು ಬಂದಿದ್ದಾರೆ. ಹೀಗಿರಬೇಕಾದರೆ ಇನ್ನೂ ಹೆಚ್ಚು ತೆರಿಗೆಯ ಹೊರೆ ಹೊರಿಸಿದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಟಿ. ವಿ. ಬಂದಿಲ್ಲ. ನಗರಗಳಲ್ಲಿ ಟಿ. ವಿ. ಬಂದಿದೆ. ಟಿ. ವಿ.ಗಳಲ್ಲಿ ಎಲ್ಲಾ ಚಿತ್ರಗಳನ್ನು ನೋಡುವುದಕ್ಕಾಗುವುದಿಲ್ಲ. ಎನ್ನುವುದು ಎಲ್ಲರಿಗೂ ಗೊತ್ತಿದೆ. ಟಿ. ವಿ ಗಳು ನಗರಗಳಲ್ಲಿ ಇದ್ದರೂ ಥಿಯೇಟರ್‌ಗಳಲ್ಲಿ ಫಿಲಮನ್ನು ನೋಡುವುದಕ್ಕೆ ಜನರು ಹೋಗುತ್ತಾರೆ. ನೀವು ಯಾವಾಗಲಾದರೂ ಮಧ್ಯಾಹ್ನದ ಹೊತ್ತು ನಗರದ ಮಧ್ಯದಲ್ಲಿ ಹೋಗಿ ನೋಡಿ ಚಿತ್ರ ಮಂದಿರಗಳ ಹತ್ತಿರ ಎಷ್ಟೊಂದು ಜನ ಇರುತ್ತಾರೆ ಎಂಬುದು ಗೊತ್ತಾಗುತ್ತದೆ. ಟಿಕೇಟೇ ಸಿಗುವುದಿಲ್ಲ. ಟಿ. ವಿ. ಗಳಲ್ಲಿ ಹೊಸ ಹೊಸ ಪಿಕ್ಚರ್‌ಗಳನ್ನು ತೋರಿಸುವುದಿಲ್ಲ. ಜೊತೆಗೆ ತೋರಿಸುವ ಚಿತ್ರಗಳು ಥಿಯೇಟರ್‌ನಲ್ಲಿ ನೋಡಿದ ರೀತಿ ಫೀಲಿಂಗ್ಸ್ ಬರುವುದಿಲ್ಲ. ರಾಜ್‌ಕುಮಾರ್ ಚಿತ್ರಕ್ಕೆ ಏನಾದರೂ ಬಂದರೆ ಟಿಕೇಟೇ ಸಿಗುವುದಿಲ್ಲ. ಚಿತ್ರೋದ್ಯಮದವರು ಒಳ್ಳೆ ಒಳ್ಳೆಯ ಚಿತ್ರಗಳನ್ನೇ ತೆಗೆಯುತ್ತಾರೆ. ನೀವು ಎಂಟರ್‌ಟೇನ್‌ಮೆಂಟ್ ಟ್ಯಾಕ್ಸನ್ನು ಹೆಚ್ಚು ಮಾಡಿರುವುದರಿಂದ ಚಿತ್ರೋದ್ಯಮಕ್ಕೆ ಏಟಿಂ ಕೊಟ್ಟಂತೆ ಆಗಿದೆ. ನೀವು ಹೆಚ್ಚು ಟ್ಯಾಕ್ಸ್ ಹಾಕಿರುವುದನ್ನು ನೋಡಿದರೆ ಕಲೆ, ಸಂಸ್ಕೃತಿಗಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲ. ಚಿತ್ರೋದ್ಯಮ ಬೆಳೆಯುವುದಕ್ಕೆ ತಾವು ಅವಕಾಶ ಮಾಡಿ ಕೊಡಬೇಕು. ಟ್ಯಾಕ್ಸ್ ಕಡಿಮೆ ಮಾಡಿದರೆ ಚಿತ್ರೋದ್ಯಮದವರೂ ಇನ್ನೂ ಹೆಚ್ಚು ಚಿತ್ರಗಳನ್ನು ತೆಗೆಯುವುದಕ್ಕೆ ಅನುಕೂಲವಾಗುತ್ತದೆ ಹಾಗೂ ಅವರಿಗೆ ಉತ್ತೇಜನ ಬರುತ್ತದೆ. ಈಗ ಕಳೆದಿರುವ

ನಿಲುವಿನಿಂದ ನಿಮ್ಮ ತತ್ವ ಸರಿಯಾದುದಲ್ಲವೆಂದು ನನಗನಿಸುತ್ತದೆ. ವರಮಾನ ತೆರಿಗೆ ಅಥವಾ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸನ್ನು ಹಾಕಬೇಡಿ ಎಂದು ನಾನು ಹೇಳುತ್ತಿಲ್ಲ. ವರಮಾನ ತೆರಿಗೆ ಹಾಕುವುದಕ್ಕೆ ಒಂದು ಮಿತಿ ಬೇಕು. ನೀವು ಎಲ್ಲಾ ತರಹದ ಟಾಕ್ಸನ್ನು ಹಾಕಿ ಹಾಕಿ ಉದ್ಯಮಗಳೇ ಮುಚ್ಚಿಕೊಂಡು ಹೋಗುವ ಹಾಗೆ ಮಾಡುತ್ತೀರಿ. ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುವುದೇನೆಂದರೆ. ಟೊಬ್ಯಾಕೋ ಕೈಗಾರಿಕೆ ಮೇಲೆ ಪ್ರತಿ ವರ್ಷವೂ ಸಹ ಎಕ್ಸೈಸ್ ಡ್ಯೂಟಿಯನ್ನು ಕೇಂದ್ರ ಸರ್ಕಾರದವರು ಹೆಚ್ಚಿಸುತ್ತಲೇ ಇದ್ದಾರೆ. ಇವರು ಹಾಕುವ ಹೆಚ್ಚುವರಿ ಟ್ಯಾಕ್ಸ್‌ನ್ನು ಕೊಡುವುದಕ್ಕಾಗದೇ ಕೆಲವು ಟೊಬ್ಯಾಕೋ ಕಂಪನಿಗಳು ಮುಚ್ಚುವ ಸ್ಥಿತಿಯಲ್ಲಿ ಬಂದು ನಿಂತುಕೊಂಡಿವೆ. ಈಗ ಏನಾಗಿದೆ ಎಂದರೆ, ಈ ವರ್ಷ ಸಿಗರೇಟ್‌ಗಳ ಉದ್ದವನ್ನು ಇದರಿಸಿ ಟ್ಯಾಕ್ಸನ್ನು ಹೆಚ್ಚಿಸಿ ಮಾಡಿದ್ದಾರೆ. ಸಿಗರೇಟು ಉದ್ದ ಇದ್ದಷ್ಟೂ ಟ್ಯಾಕ್ಸ್ ಹೆಚ್ಚಾಗುತ್ತದೆ. ಕೇಂದ್ರ ಸರ್ಕಾರದವರು ಈ ರೀತಿ ಹೆಚ್ಚು ಉದ್ದದ ಸಿಗರೇಟಿಗೆ ಹೆಚ್ಚು ಟ್ಯಾಕ್ಸ್ ಹಾಕುವುದರಿಂದ ಸಿಗರೇಟಿನ ಉದ್ದವನ್ನು ಕಡಿಮೆ ಮಾಡುವುದಕ್ಕೆ ಸಿಗರೇಟ್ ಕಂಪನಿಗಳು ಹೊರಟಿವೆ. ಒಟ್ಟಿನಲ್ಲಿ ಇವರು ತೆರಿಗೆಯಿಂದ ತಪ್ಪಿಸಿಕೊಳ್ಳಬೇಕು. ಅದಕ್ಕೆ ಈ ದಾರಿಯನ್ನು ಕಂಪನಿಗಳವರು ಹುಡುಕಿಕೊಳ್ಳುತ್ತಿದ್ದಾರೆ. ಕಂಪನಿಗಳವರು ಟ್ಯಾಕ್ಸ್‌ನಿಂದ ತಪ್ಪಿಸಿಕೊಳ್ಳುವುದಕ್ಕೆ ಸರ್ಕಾರವೇ ದಾರಿ ಮಾಡಿಕೊಟ್ಟಂತೆ ಇದರಿಂದ ಆಗುತ್ತದೆ. ನಿಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಆನ್ಯುಯಲ್ ರಿಪೋರ್ಟ್‌ನಲ್ಲಿ ಎಲ್ಲಾ ವಿಷಯವನ್ನು ತಿಳಿಸಿದ್ದಾರೆ. ಇನ್ನೂ ಎಂಟ್ರಿ ಟ್ಯಾಕ್ಸ್ ಬರಬೇಕಾದುದು ಬಹಳ ಇದೆ ಅದನ್ನೇ ಸರ್ಕಾರ ಇನ್ನೂ ವಸೂಲಿ ಮಾಡಿಲ್ಲ. ಕರ್ನಾಟಕ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಆಕ್ಟ್ ಪ್ರಕಾರ ವಸೂಲಿ ಮಾಡುತ್ತಿರುವ ಹಣದಲ್ಲಿ ೧೯೮೦–೧೯೮೧ರಲ್ಲಿ ಡಿಮ್ಯಾಂಡ್ ೨೦.೮೭ ಕೋಟಿ ಇದ್ದರೆ ಕಲೆಕ್ಷನ್ ಮಾಡಿರುವುದು ೨೦ ೪೦ ಕೋಟಿ ರೂಪಾಯಿಗಳು ಬ್ಯಾಲೆನ್ಸ್ ೪೭ ಲಕ್ಷ ರೂಪಾಯಿಗಳನ್ನು ಇನ್ನೂ ವಸೂಲಿ ಮಾಡಿಲ್ಲ. ೧೯೮೨–೮೩ರಲ್ಲಿ ೨೫.೦೫ ಕೋಟಿ ಡಿಮ್ಯಾಂಡ್ ಇದ್ದರೆ, ೨೪.೪೧ ಕೋಟಿ ರೂಪಾಯಿಗಳನ್ನು ಕಲೆಕ್ಷನ್ ಮಾಡಿದ್ದಾರೆ, ಬ್ಯಾಲೆನ್ಸ್ ೬೪ ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಿಲ್ಲ. ೧೯೮೩–೮೪ರಲ್ಲಿ ೨೬.೯೯ ಕೋಟಿ ಡಿಮ್ಯಾಂಡ್ ಇದ್ದರೆ ೨೬.೦೭ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ ಬ್ಯಾಲೆನ್ಸ್ ಇನ್ನೂ ೮೨ ಲಕ್ಷ ರೂಪಾಯಿಗಳು ಇವೆ. ೧೯೮೪-೮೫ರಲ್ಲಿ ೨೯.೧೪ ಕೋಟಿ ಡಿಮ್ಯಾಂಡ್ ಇದ್ದರೆ ೩೮.೧೨ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ ಬ್ಯಾಲೆನ್ಸ್ ೧.೦೨ ಕೋಟಿ ಇದೆ. ೧೯೮೫–೮೬ರಲ್ಲಿ ೩೨.೮೫ ಕೋಟಿ ಡಿಮ್ಯಾಂಡ್ ಇದ್ದರೆ, ಕಲೆಕ್ಷನ್ ೩೧.೬೯ ಕೋಟಿ ಇನ್ನೂ ೧.೧೬ ಕೋಟಿ ರೂಪಾಯಿಗಳು ಬ್ಯಾಲೆನ್ಸ್ ಇದೆ. ಇದನ್ನು ನೋಡಿದರೆ ನಿಮ್ಮ ಕಲೆಕ್ಷನ್ ಮೆಷಿನರಿ ಸರಿ ಇಲ್ಲವೆಂದು ಹೇಳಬೇಕಾಗುತ್ತದೆ. ೧೯೮೬–೮೭ನೇ ಸಾಲಿನಲ್ಲಿ ೩೩ ಕೋಟಿ ರೂಪಾಯಿಗಳ ಡಿಮ್ಯಾಂಡ್ ಇತ್ತು. ಇದುವರೆಗೆ ಅಂದರೆ ಡಿಸೆಂಬರ್ ಕೊನೆಯವರೆಗೂ ೨೪.೨೫ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಲಾಗಿದೆ. ಇನ್ನು ಉಳಿದ ಹಣವನ್ನು ಉಳಿದ ಮೂರು ತಿಂಗಳಿನಲ್ಲಿ ಯಾವ ರೀತಿ ಕಲೆಕ್ಟ್ ಮಾಡಿತ್ತೀರೋ ಗೊತ್ತಿಲ್ಲ. ಟ್ಯಾಕ್ಸ್ ಬಗ್ಗೆ ನನ್ನ ಅಭಿಪ್ರಾಯವನ್ನು ಒಟ್ಟಿನಲ್ಲಿ ಹೇಳಬೇಕಾದರೆ ಇದು ಬಹಳ ದುಬಾರಿ ಆಯಿತು. ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಜನ ಸಾಮಾನ್ಯರಿಗೆ ಎಂಟರ್‌ಟೇನ್‌ಮೆಂಟ್ ಕೊಡಬೇಕು. ಅವರ ಮೇಲೆ ಹೆಚ್ಚು ಹೊರೆ ಹೇರಿಸುವುದು ಸರಿಯಾದುದಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಆರ್. ವೆಂಕಟರಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಮನರಂಜನಾ ತೆರಿಗೆಯನ್ನು ಈ ದಿವಸ ಎಷ್ಟು ಹೆಚ್ಚಿಗೆ ಮಾಡಿದ್ದಾರೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರಾದ ಕೃಷ್ಣಪ್ಪನವರು ವಿವರವಾಗಿ ಹೇಳಿದ್ದಾರೆ. ಈ ವಿಷಯವಾಗಿ ಮತ್ತು ಮಿಕ್ಕ ಕೆಲವು ವಿಷಯಗಳ ಕುರಿತಾಗಿ ಕೆಲವು ಮಾತುಗಳನ್ನು ನಾನು ಹೇಳಬಯಸುತ್ತೇನೆ.

೧೯೮೫–೮೬ರಲ್ಲಿ ಮನರಂಜನಾ ತೆರಿಗೆ ವಸೂಲು ಮಾಡಿರುವುದು, ೩೧ಕೋಟಿ, ೨೧ಲಕ್ಷ ರೂಪಾಯಿಗಳು. ೧೯೮೬-೮೭ರಲ್ಲಿ ಡಿಸೆಂಬರ್‌ವರೆಗೆ, ೨೪ಕೋಟಿ, ೨೫ ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದಾರೆ. ಇದಕ್ಕೆ ಸರ್‌ಚಾರ್ಜ್ ಹಾಕಿದ್ದಾರೆ. ಅದರಿಂದ ೬೦ಕೋಟಿ

ರೂಪಾಯಿಗಳು ಸಿಕ್ಕಿದೆ. ಸರ್‌ಚಾರ್ಜ್ ಹಾಕಿರುವುದನ್ನು ಸಿನೀಮಾ ಇಂಡಸ್ಟ್ರಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಉಪಯೋಗಿಸುತ್ತೇವೆ ಎಂದು ಹೇಳಿದ್ದಾರೆ, ಈಗಾಗಲೇ ೬ ಕೋಟಿಗಳನ್ನು ಖರ್ಚು ಮಾಡಿದ್ದಾರೆ. ಉಳಿದ ಹಣ ಖರ್ಚು ಮಾಡುತ್ತಾರೆ. ಸಿನಿಮಾ ಇಂಡಸ್ಟ್ರಿಯವರು ಇದನ್ನು ವಿರೋಧ ಮಾಡಿದ್ದಾರೆ. ಇವರು ಹಾಕಿರಿಂದ ಟ್ಯಾಕ್ಸ್ ಇಂಡಸ್ಟ್ರಿಯವರ ಲೆಕ್ಕದ ಪ್ರಕಾರ ೨೦ ಕೋಟಿ ಜಾಸ್ತಿ ಬರುತ್ತದೆ. ಈಗ ಈ ಹೊರೆಯನ್ನು ಅವರ ಮೇಲೆ ಹಾಕುವುದು ಸರಿಯಲ್ಲ. ಏಕೆಂದರೆ, ಸಿನಿಮಾ ಇಂಡಸ್ಟ್ರಿ ಮೊದಲು ಇದ್ದ ಹಾಗೆ ಈಗ ಇಲ್ಲ. ವಿಡಿಯೋ, ಟಿ. ವಿ. ಮುಂತಾದವುಗಳು ಬಂದು ಸಿನಿಮಾ ಜನಪ್ರಿಯತೆಯನ್ನು ಸಾಕಷ್ಟು ಕಡಿಮೆ ಮಾಡಿದೆ. ಸಿನಿಮಾಕ್ಕೆ ಹೋಗುವವರು ಕಡಿಮೆಯಾಗಿದ್ದಾರೆ. ಟಿ. ವಿ. ಗಳು ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲಿಯೂ ಇವೆ. ಇಲ್ಲದಿದ್ದರೂ ಕೂಡ ಸುತ್ತಮುತ್ತ ಇರುವವರ ಮನೆಗೆ ಹೋಗಿಯಾದರೂ ಜನಗಳು ನೋಡಂತಾರೆ. ಈಗ ಹಿಂದಿ, ಕನ್ನಡ ಇಂಗ್ಲೀಷ್. ಭಾಷೆಗಳ ಚಿತ್ರ ಗಳನ್ನು ತೋರಿಸುತ್ತಾ ಇದ್ದಾರೆ. ಈ ಕಾರಣದಿಂದಾಗಿ ನಗರಪ್ರದೇಶಗಳಲ್ಲಂತೂ ಸಿನಿಮಾದವರಿಗೆ ಸಾಕಷ್ಟು ಪೆಟ್ಟು ಬಿದ್ದಂತಾಗಿದೆ ಬೆಂಗಳೂರಿನಲ್ಲಿರುವ ಥಿಯೇಟರ್‌ನವರು ಕೆಲವರು ಮುಚ್ಚುವ ಸ್ಥಿತಿಯಲ್ಲಿದ್ದಾರೆ. ಈಗಾಗಲೇ ಆರು ಸಿನಿಮಾ ಮಂದಿರಗಳು ಮುಚ್ಚಲ್ಪಟ್ಟಿವೆ. ಇನ್ನೂ ಕೆಲವರು ಮಾನ್ಯ ಲಕ್ಷ್ಮೀಸಾಗರ್‌ರವರ ಅಪ್ಪಣೆಗಾಗಿ ಕಾಯುತ್ತಿದ್ದಾರೆ. ಇವರ ಪರ್ಮಿಶನ್ ಬೇಕಾಗಿದೆ ಎಂದು ಕಾಣುತ್ತದೆ.

ಸಾಮಾನ್ಯ ಜನರಿಗಿರುವ ಮನರಂಜನೆ ಅಂದರೆ ಸಿನಿಮಾ ಮಾತ್ರ. ಅದನ್ನು ಬಿಟ್ಟರೆ ಬೇರೆ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಸಿನಿಮಾಕ್ಕೆ ಹೋಗುವ ವಾಡಿಕೆ ಜಾಸ್ತಿ ಯಾಗುತ್ತಾ ಇದೆ. ಆದುದರಿಂದ ಈ ಹೆಚ್ಚಿನ ಕರಭಾರ ಸಾಮಾನ್ಯ ಜನರ ಮೇಲೆ ಬೀಳುತ್ತದೆ. ಆದಕಾರಣ ಈ ಟ್ಯಾಕ್ಸನ್ನು ಹಾಕಂವುದು ಸರಿಯಲ್ಲ. ಈ ಇಂಡಸ್ಟ್ರಿಗೆ ಆರು ಕೋಟಿ ರೂಪಾಯಿ ಗಳನ್ನು ಖರ್ಚುಮಾಡಿದ್ದೀರಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ಕನ್ನಡ ಸಿನಿಮಾಕ್ಕೆ ಸೇಲ್ಸ್ ಟ್ಯಾಕ್ಸ್ ಎಕ್ಸೆಮಾಪಶನ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಉಳಿದ ಭಾಷೆ ಎಂದರೆ, ತೆಲುಗು, ತುಮಿಳು, ಹಿಂದಿ, ಇಂಗ್ಲೀಷ್, ಚಿತ್ರಗಳಿಗೆ ಈ ವಿನಾಯಿತಿ ಇಲ್ಲ ಎಂದು ಹೇಳಿದ್ದಾರೆ. ಹೀಗೆ ವಿನಾಯಿತಿ ಕೊಡುವುದಾದರೆ ಎಲ್ಲಾ ಚಿತ್ರಗಳಿಗೂ ಕೊಡಬೇಕು. ಎಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಭಕ್ತವತ್ಸಲಂ, ಚಲನಚಿತ್ರ ವಾಣಿಜ್ಯಮಂಡಳಿಯ ಅಧ್ಯಕ್ಷರು, ಅವರು ಒಂದು ಆರ್ಟಿಕಲ್ಲನ್ನು ಬರೆದಿದ್ದಾರೆ. ತುಂಬಾ ಚೆನ್ನಾಗಿ ಇದೆ. ಅದನ್ನು ಎಲ್ಲಾ ನಾನು ಓದುವುದಕ್ಕೆ ಹೋಗುವುದಿಲ್ಲ. ಒಂದೆರಡು ಪ್ಯಾರಾ ಓದುತ್ತೇನೆ.

> "It is not clear what Prompted the Chief Minister to make the suggestion that he would exempt only kannada films from the payment of the proposed salestax of 4% thus immediately placing the kannada film industry in dilemma..."

Why he was said like this ? He has said it because there will be discrimination. ಇದು ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ೨೪ನೇ ಮಾರ್ಚ್‌ನ ಪ್ರಜಾವಾಣಿಯಲ್ಲಿಯೂ ಬಂದಿದೆ. ಅವರು ಸಿನಿಮಾ ಬಂದ್‌ಗೆ ಕರೆಕೊಟ್ಟಿದ್ದು, ಅನಂತರ ಇವರ ಆಶ್ವಾಸನೆ ಮೇರೆಗೆ ಹಾಗೆಯೇ ಬಿಟ್ಟುಬಿಟ್ಟಿದ್ದಾರೆ. ಸರಕಾರದವರು ಹಾಕುವ ತೆರಿಗೆಯಿಂದ ಸಿನಿಮಾ ಇಂಡಸ್ಟ್ರಿಗೂ ಖರ್ಚು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಇವರು ತೆರಿಗೆಯನ್ನು ಹಾಕಿದರು ಅದನ್ನು ಪರೋಕ್ಷವಾಗಿ ಕೊಡಬೇಕಾದವರು ಸಾಮಾನ್ಯ ಪ್ರೇಕ್ಷಕರು ಅಲ್ಲವೇ ? ತೆರಿಗೆ ಕೊಡಬೇಕಾದ ಉದ್ದಿಮೆಯವರು ಎಂದರೆ ಸಿನಿಮಾದವರು ತಮ್ಮ ಟಿಕೆಟ್ ಬೆಲೆಯನ್ನು ಹೆಚ್ಚಿಸಿ ಮಾಡಿ ಜನರಿಂದ ಅದನ್ನು ವಸೂಲು ಮಾಡಿ ನಿಮಗೆ ಕೊಡುತ್ತಾರೆ. ಸುಮಾರು ಎರಡೂವರೆ ರೂಪಾಯಿಗಳವರೆಗೆ ಟಿಕೆಟ್ ಬೆಲೆ ಹೆಚ್ಚಿಗೆ ಮಾಡಬೇಕಾಗಬಹುದು ಎಂದು ಕಾಣುತ್ತದೆ. ಆದುದರಿಂದ ಸಿನಿಮಾ ಗೀಳು ಕಡಿಮೆಯಾಗುತ್ತಿರುವ ಈ ದಿನಗಳಲ್ಲಿ ಟ್ಯಾಕ್ಸ್ ಹಾಕಿ ಮಂತ್ರಾ ಗುಬಾರಿ ಮಾಡಿದರೆ ಅದರಿಂದ ಪ್ರಯೋಜನವಾಗುವುದಿಲ್ಲ.

ನಾನು ತಪ್ಪಿನ್ನು ಕೇಳುವುದು ತಾವು ದಯವಿಟ್ಟು ಆ ಕೆಲಸಕ್ಕೆ ಹೋಗಬೇಡಿ. ನಿಮಗೆ ಸಿನಿಮಾ ಇಂಡಸ್ಟ್ರಿಯಿಂದ ಈಗಾಗಲೇ ೯೦ ಕೋಟಿ ಬರುತ್ತಿದೆ. ಆದರಲ್ಲಿ ೩೨ ಕೋಟಿ ಸರ್‌ಚಾರ್ಜ್ ಬೇರೆ ಬರುತ್ತದೆ. ಆ ಲೆಕ್ಕ ಇನ್ನೂ ಕೊಟ್ಟಿಲ್ಲ. ಇದನ್ನೆಲ್ಲಾ ಸಿನಿಮಾ ಇಂಡಸ್ಟ್ರಿ ಮೇಲೆ ಹೇರುವ ಬರ್ಡನ್ ತಪ್ಪಬೇಕು. ಇನ್ನೊಂದು, ಕನ್ನಡ ಫಿಲ್ಮ್‌ಗಳಿಗೆ ರಿಯಾಯಿತಿ ಕೊಡುವ ವಿಚಾರದಲ್ಲಿ ಮೊದಲು ಕಲಾತ್ಮಕ ಚಿತ್ರಗಳಂಥ, ಮಾರಲ್ ಫಿಲ್ಮ್‌ಗಳು ಜಾಸ್ತಿ ಬರುತ್ತಿದ್ದುವು. ಈಗ ಅವೆಲ್ಲ ಹೋಗಿಬಿಟ್ಟಿವೆ. ಏಕೆಂದರೆ ಜಾಸ್ತಿ ಇವರು ತೆರಿಗೆ ಹಾಕಿ ಹಾಕಿ ಅವರೂ ದುಡ್ಡು ಜಾಸ್ತಿ ಪಡೆಯಲೇಬೇಕಾಗಿರುವುದರಿಂದ ಡಿಶುಂ ಡಿಶುಂ ಸಿನಿಮಾಗಳಿಗೆ ಬಂದುಬಿಟ್ಟಿದ್ದಾರೆ. ಅರೆಬೆತ್ತಲೆ ಸಿನಿಮಾಗಳು ಶುರುವಾಗಿವೆ. ಒಬ್ಬ ಹಿರೋ ಒಂದು ಹೊಡೆದ ಅಂದರೆ ೨೦ ಜನ ಒಂದೇ ಸಲ ಬಿದ್ದೂ ಹೋಗಿಬಿಡುತ್ತಾರೆ. ಕಳೆದೆರಡು ಮೂರು ವರ್ಷಗಳಿಂದ ವರ್ಷಕ್ಕೆ ೨೦ ಕನ್ನಡ ಸಿನಿಮಾ ಬರುತ್ತಿವೆ. ಈ ಭಕ್ಷವತ್ಸಲಂ ಎನ್ನುವವರು ಹೇಳುವ ಪ್ರಕಾರ ೭೦ ರಲ್ಲಿ ಹತ್ತು ಸಿನಿಮಾ ಮಾತ್ರ ಸಕ್ಸೆಸ್ ಆಗುತ್ತವೆ. ಉಳಿದವೆಲ್ಲ ಫೇಲ್ಯೂರ್ ಆಗುತ್ತವೆ. ಇನ್ನೊಂದೇನೆಂದರೆ ಸಿನಿಮಾ ರೀಲ್‌ಗಳನ್ನ ಒಯ್ಯುವ ಬಾಕ್ಸ್‌ಗಳನ್ನೂ ಕವಾಡಿಟಿ ಎಂದು ಲಿಸ್ಟಿಗೆ ಸೇರಿಸಿ ೪ ಪರ್ಸೆಂಟ್ ಟ್ಯಾಕ್ಸ್ ಅವುಗಳ ಮೇಲೂ ಲೆವಿ ಮಾಡಿದ್ದಾರೆ. ಇದು ಸರಿಯಲ್ಲ ಎಂದು ಸಂಬಂಧಪಟ್ಟವರು ಪ್ರೊಟೆಸ್ಟ್ ಕೂಡ ಮಾಡಿದ್ದಾರೆ. ಇದರಿಂದ ಬಹಳ ಚಿತ್ರ ನಿರ್ಮಾಪಕರಿಗೆ ತೊಂದರೆಯಾಗುತ್ತದೆ. ಒಟ್ಟಿನಲ್ಲಿ ಈ ತೆರಿಗೆಗಳ ಪರಿಣಾಮದಿಂದ ಚೀಪ್ ಎಂಟರ್‌ಟೇನ್‌ಮೆಂಟ್ ಸಿನಿಮಾಗಳು ಬಂದು ಜನರ ಮನಸ್ಸನ್ನು ಹಾಳು ಮಾಡುತ್ತಿವೆ.

ಶ್ರೀ ಸಿ. ಭೈರೇಗೌಡ.—ದಿವಸಕ್ಕೆ ಎಷ್ಟು ಸಿನಿಮಾ ನೀವು ನೋಡೋದು ?

ಶ್ರೀ ಆರ್. ವೆಂಕಟರಾಮಯ್ಯ.—ಇಲ್ಲ ಸ್ವಾಮಿ. ಹೆಚ್ಚು ನೋಡೋಲ್ಲ ನಾನು. ಆಗಾಗ ನೋಡುತ್ತೇನೆ ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಾರ್, ಅವರು ಇದೇ ಮನೆಯಲ್ಲಿ ತಿಂಗಳಿಗೊಮ್ಮೆ ಸಿನಿಮಾ ನೋಡುವುದಾಗಿ ಹೇಳಿದರು. ಇವತ್ತು ಇಲ್ಲ ಏನನ್ನುತ್ತಿದ್ದಾರೆ. ಇದು ಕಂಟೆಂಪ್ಟ್ ಆಫ್ ಹೌಸ್ ಆಗುತ್ತದೆ.

ಅಧ್ಯಕ್ಷರು.—ಆಯಿತು, ಪ್ರಿವಿಲೇಜ್ ನೋಟೀಸ್ ಕಳುಹಿಸಿ ನೋಡೋಣ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಲ್ಪ ಒಳ್ಳೆಯ ಕಥೆ ಇದ್ದರೆ, ಹಾಸ್ಯ ಇದ್ದರೆ ಮಾತ್ರ ನಾನು ನೋಡುತ್ತೇನೆ. ಲಾರಲ್ ಅಂಡ್ ಹಾರ್ಡಿ, ಚಾರ್ಲಿ ಚಾಪ್ಲಿನ್ ತರಹದ ಸಿನಿಮಾಗಳನ್ನು ನೋಡುತ್ತೇನೆ, ಅಷ್ಟೆ. ಡಾ. ರಾಜಕುಮಾರ್‌ದು ಧ್ರುವತಾರೆ ನೋಡಿದೆ, ಒಳ್ಳೆಯ ಕಥೆ, ಚೆನ್ನಾಗಿ ಬಂತು. ಆಮೇಲೆ ಆದ್ಯಾವುದೋ ರಥಸಪ್ತಮಿ ಅಂತೆ ಅವೂ ಇವೂ ಬಂದು ಹಾಳಾಯ್ತು.

ಶ್ರೀ ಸಿ ಭೈರೇಗೌಡ.—ಸಾರ್ ಇವರು ತೆಲುಗು ಸಿನಿಮಾಗಳನ್ನು ಸೆಕೆಂಡ್ ಷೋ ಅರ್ಧ ಆದಮೇಲೆ ನೋಡುತ್ತಾರೆ. —

ಶ್ರೀ ಆರ್. ವೆಂಕಟರಾಮಯ್ಯ.—ಭಕ್ಷವತ್ಸಲಂ ಅವರು ಮುಂದುವರಿದು ಹೇಳುತ್ತಾರೆ :

"The Chief Minister has asked the film industry to suggest to him ways of 'raising' the revenue that would be lost by exempting films from Sales Tax. That is honestly adding insult to injury, to an industry that is going through a period of economic metamorphosis brought by T.V. and Video The revenue must be sought from the big booming video industry. Every video cassette can be taxed 10% of its hire rate provided the Government honestly wish s to do so and set up the machinary for collection."

ನಾನು ಹೇಳುತ್ತಿರುವುದು ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಏನು ಹಾಕಿದ್ದಾರೆ ನಿಜವಾಗಿ ಇದರಿಂದ ಸಿನಿಮಾ ಇಂಡಸ್ಟ್ರಿಗೆ ದೊಡ್ಡ ಪೆಟ್ಟು ಬೀಳುತ್ತದೆ. ಇದರಿಂದ ಅನುಕೂಲ ಆಗುತ್ತಿಲ್ಲ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯಂ. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯೊಳಗೆ ಮನರಂಜನಾ ತೆರಿಗೆಯನ್ನು ಜಾಸ್ತಿ ಮಾಡತಕ್ಕಂಥಾದ್ದನ್ನು ನೋಡಿದರೆ ಮುಖ್ಯವಾಗಿ ಈ ಕೈಗಾರಿಕೆಯ ಮೇಲೆ ಹೊರೆ ಬೀಳುವುದಕ್ಕಿಂತಲೂ ಜನಗಳ ಮೇಲೆ ಹೊರೆ ಬೀಳುತ್ತದೆಂದು ನಾನು ಹೇಳಬೇಕಾಗುತ್ತದೆ. ಜನ ಇದನ್ನು ಭರಿಸಬೇಕಾಗುತ್ತದೆ ನಮ್ಮ ದೇಶದಲ್ಲಿ ಇನ್ನೂ ಕೆಲವು ಕಡೆಗಳಲ್ಲಿ ಸಿನಿಮಾ ಕೈಗಾರಿಕೆ ಎಷ್ಟು ದೊಡ್ಡದಾಗಿ ಬೆಳೆಯಂತ್ತಿದೆ. ಅಂದರೆ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳನ್ನು ಬಿಟ್ಟರೆ ಕಪ್ಪು ಹಣವನ್ನು ಸಂಪಾದನೆ ಮಾಡತಕ್ಕಂತಹವರ ಒಂದು ಪಟ್ಟಿಯನ್ನು ಮಾಡಿದರೆ ದೊಡ್ಡ ನಟರೂ ಕೂಡ ಇದರಲ್ಲಿ ಬರುತ್ತಾರೆ ಎಂದು ನನ್ನ ಅನಿಸಿಕೆಯಾಗಿದೆ. ಒಂದಿ ಸಿನಿಮಾಗಳಲ್ಲಿ ನಟನೆ ಮಾಡತಕ್ಕಂತಹ ನಟರು ಒಂದು ಚಿತ್ರಕ್ಕೆ ೩೫-೪೦ ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆಂದು ಕೇಳಿದ್ದೇವೆ, ನನಗೆ ಅಷ್ಟು ಸರಿಯಾಗಿ ಗೊತ್ತಿಲ್ಲ. ಕನ್ನಡದಲ್ಲಿ ಅಷ್ಟೊಂದು ಇರಕ್ಕಿಲ್ಲ. ಅದು ಬೇರೆ ಪ್ರಶ್ನೆ. ಕನ್ನಡ ನಟರಿಗೆ ಮೂರು ಲಕ್ಷವೆಂದು ಹೇಳುತ್ತಿದ್ದಾರೆ. ಈ ರೀತಿಯಾದ ಸಂಭಾವನೆಯನ್ನು ಒಂದು ಸಿನಿಮಾಗೆ ಪಡೆದಂತಹ ಹಣದಲ್ಲಿ ತೆರಿಗೆಯನ್ನು ಸರಕಾರಕ್ಕೆ ಸಂಪೂರ್ಣವಾಗಿ ಕೊಡುತ್ತಿದ್ದಾರೆಯೇ, ಒಂದು ವೇಳೆ ತೆರಿಗೆಯನ್ನು ಕೊಡದಂತಹ ಪಕ್ಷದಲ್ಲಿ ವರ್ಷಕ್ಕೊಂದು ಸಾರಿ ಅವರ ಮನೆಯನ್ನು ರೈಡ್ ಮಾಡಬೇಕು, ಅವರ ಪ್ರಾಪರ್ಟಿಯನ್ನು ಚೆಕ್ ಮಾಡುತ್ತಾರೋ ಇಲ್ಲವೋ ಎಂಬುದನ್ನೂ ಕೂಡ ನೋಡುವ ಮೂಲಕ ಇಂತಹ ಹಣವನ್ನು ಬಯಲಿಗೆ ತರುವಂತಹ ಪ್ರಯತ್ನವನ್ನು ಮಾಡಿದರೆ ಜನಗಳ ಮೇಲೆ ತೆರಿಗೆ ಹೊರಿಸತಕ್ಕಂತಹ ಕಾರ್ಯವನ್ನು ಕೈಬಿಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಇನ್ನೂ ಕೆಲವು ಕಡೆಗಳಲ್ಲಿ ಮನರಂಜನಾ ತೆರಿಗೆಯಿಂದ ತಪ್ಪಿಸಿಕೊಳ್ಳತಕ್ಕಂತಹ ಒಂದು ಕಾರ್ಯ ನಡೆಯುತ್ತಿದೆ. ಥಿಯೇಟರ್‌ಗಳಲ್ಲಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಅರ್ಧ ಟಿಕೆಟ್ ಹರಿದು ಕೊಳ್ಳಬೇಕು ಆದರೆ ಎಲ್ಲಾ ಥಿಯೇಟರ್‌ಗಳಲ್ಲೂ ಟಿಕೆಟ್‌ಗಳನ್ನು ಹರಿಯುತ್ತಿಲ್ಲ. ಉದಾಹರಣೆಗೆ ನನ್ನ ಸ್ವಂತ ಊರಿನದೇ ಆದಎಚಾರವನ್ನು ಹೇಳುತ್ತೇನೆ. ಅಲ್ಲಿ ಒಂದು ಥಿಯೇಟರ್ ಇದೆ ಆದು ಪರ್ಮನೆಂಟ್ ಥಿಯೇಟರೋ ಅಥವಾ ಟೂರಿಂಗ್ ಥಿಯೇಟರೋ ಗೊತ್ತಿಲ್ಲ. ನಾಲ್ಕು ಕಡೆ ಗೋಡೆ ಮಾತ್ರ ಬಹಳ ಚೆನ್ನಾಗಿ ಕಟ್ಟಿದ್ದಾರೆ, ನಾನು ಶಿನೇ ತರಗತಿಯಲ್ಲಿ ಓದುವಾಗ ಹೋಗಿದ್ದೆ ಆಗ ಯಾವ ಟಿಕೆಟ್ ಕೊಡುತ್ತಿದ್ದರೋ ಅದೇ ಟಿಕೆಟ್ ಅನ್ನು ಇವೊತ್ತು ಕೊಡುತ್ತಿದ್ದಾರೆ. ಅಲ್ಲಿ ಟಿಕೆಟ್ ಹರಿದದ್ದನ್ನು ನಾನು ನೋಡಲಿಲ್ಲ ಜನತಾ ಟಾಕೀಸ್ ಎಂದು ಅದರ ಹೆಸರು ಅದೂ ಇವರ ಪಾರ್ಟಿ ಹೆಸರಲ್ಲೇ ಇದೆ. ತೆರಿಗೆಯಿಂದ ತಪ್ಪಿಸಿಕೊಳ್ಳತಕ್ಕಂತಹ ಥಿಯೇಟರ್‌ಗಳಲ್ಲಿ ಚಕ್ ಏನು ಮಾಡಬೇಕಾಗಿದೆ. ಆ ಚಕ್ ಸಿಸ್ಟಮ್ ಸರಿಯಾಗಿಲ್ಲ, ತೆರಿಗೆಗಳಿಂದ ತಪ್ಪಿಸಿಕೊಳ್ಳತಕ್ಕಂತಹ ಒಂದು ಪ್ರಯತ್ನ ನಡೆಯುತ್ತಿದೆ. ಒಂದು ಬಾರಿ ಕೊಟ್ಟಂತಹ ಟಿಕೆಟ್‌ಗಳನ್ನೇ ಪದೇ ಪದೇ ಕೊಡುವುದರಿಂದಾಗಿ ಟ್ಯಾಕ್ಸ್ ಕೊಡುವುದರಿಂದ ತಪ್ಪಿಸಿಕೊಳ್ಳುತ್ತಾರೆ, ಸರಕಾರಕ್ಕೆ ಬರಬೇಕಾದಂತಹ ತೆರಿಗೆಯನ್ನು ತಪ್ಪಿಸುವ ಮೂಲಕ ಸರಕಾರಕ್ಕೆ ನಷ್ಟ ಉಂಟು ಮಾಡುತ್ತಾರೆ. ನಟರು ಕೊಡತಕ್ಕಂತಹ ಇನ್‌ಕಂಟ್ಯಾಕ್ಸ್ ಏನಿದ ಅದನ್ನೂ ತಪ್ಪಿಸುತ್ತಾರೆ. ಈ ವ್ಯವಸ್ಥೆಯಲ್ಲಿ ಅದು ಸರ್ವೇ ಸಾಮಾನ್ಯ. ಸುಳ್ಳು ಲೆಕ್ಕ ತೋರಿಸುವುದು ದೇಶದಲ್ಲಿರತಕ್ಕ ಬಂಡವಾಳ ಶಾಹಿಗಳಲ್ಲಿ ಸರ್ವೇ ಸಾಮಾನ್ಯವಾಗಿದೆ. ಇಂತಹ ವ್ಯವಸ್ಥೆಯಲ್ಲಿರತಕ್ಕ ಲೋಪ ದೋಷಗಳನ್ನು ಸರಿಪಡಿಸುವುದಕ್ಕೆ ಸರಕಾರ ಆಗಿಂದಾಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡರೆ ಇಂತಹ ತೆರಿಗೆಗಳನ್ನು ಹಾಕುವಂತಹ ಪ್ರಯತ್ನವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ಹಾಕಿರತಕ್ಕಂತಹ ತೆರಿಗೆಯನ್ನು ನೋಡಿದರೆ ನಿಜವಾಗಲೂ ಕೂಡ ಸಾಮಾನ್ಯ ಜನರಿಗೆ ಬಹಳ ಹೊರೆಯಾಗುತ್ತದೆಂದು ನನಗನ್ನಿಸುತ್ತದೆ. ಒಬ್ಬ ಮನುಷ್ಯನಾಗಿ ಜೀವನ ಮಾಡಬೇಕೆಂದರೆ ದಿನದ ೨೪ ಗಂಟೆಗಳಲ್ಲಿ ಭಾಗ ಮಾಡಬೇಕು. ೮ ಗಂಟೆ ಕೆಲಸಕ್ಕೆ, ೮ ಗಂಟೆ ಆವನು ಊಟ ಮಾಡುವುದಕ್ಕೆ ಮತ್ತು ಇನ್ನಿತರ ಕೆಲಸಕ್ಕೆ ಎಂದು ಇನ್ನು ಉಳಿದ ಕೆಲವು ಗಂಟೆಗಳನ್ನು ಎಂಟರ್‌ಟೈನ್‌ಮೆಂಟ್‌ಗೆಂದು ಇಡಬೇಕು. ಆದರೆ ನಮ್ಮ ದೇಶದಲ್ಲಿ ಎಷ್ಟು ಮಂದಿ ಮನರಂಜನೆ ಪಡೆಯುತ್ತಾರೆ ಎಂಬುದನ್ನು ಯೋಚನೆ ಮಾಡಬೇಕು. ಎಲ್ಲರೂ ಮನರಂಜನೆಯನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ಕೆಲವರು ಬೆಳಿಗ್ಗೆ ೮ ರಿಂದ ರಾತ್ರಿ ೭ ರವರೆಗೆ ದುಡಿಯುವ ಜನರಿದ್ದಾರೆ. ಅವರಿಗೆ ಎಂಟರ್‌ಟೈನ್‌ಮೆಂಟ್ ಎಂದರೆ ರಾತ್ರಿ ಒಂದು ಬಾಟಲ್ ಹೆಂಡ ಕುಡಿಯುವುದೇ ಒಂದು ಎಂಟರ ಟೈನ್‌ಮೆಂಟ್. ಎಷ್ಟೋ ಜನ ಸಿನಿಮಾ ನೋಡುವುದೇ ಇಲ್ಲ. ನಾನು ಮೊದಲನೆಯದಾಗಿ ಸಿನಿಮಾ ನೋಡಿದ್ದು ನಾನು ೫-೬ನೇ ತರಗತಿಯಲ್ಲಿ ಇದ್ದಾಗ ಆದಕ್ಕೆ ಮೊದಲು ನಾನು ಸಿನಿಮಾವನ್ನು ನೋಡಿರಲಿಲ್ಲ. ಹಳ್ಳಿಯಲ್ಲಿ ಈ ರೀತಿಯು ಎಷ್ಟೋ ಜನಗಳಿದ್ದಾರೆ. ಯಾವುದೋ ಕೆಲವು ಜನರ ಜೇಬಿಗೆ ಕತ್ತರಿ ಹಾಕತಕ್ಕಂತಹ ಪ್ರಯತ್ನವನ್ನು

ಸರಕಾರ ಈ ಮೂಲಕ ಮಾಡುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲವೆಂದು ನನ್ನ ಅನಿಸಿಕೆ. ಸಾಮಾನ್ಯ ಜನರಿಗೆ ಹೊರೆ ಹೊರಿಸತಕ್ಕಂತಹ ಮಸೂದೆಯನ್ನು ಸರಕಾರ ಏನೂ ಮಂಡಿಸಿದೆಯೋ ಇದಕ್ಕಿಂತ ಬದಲಾಗಿ ಇದನ್ನು ವಾಪಸ್ ತೆಗೆದುಕೊಂಡು ತೆರಿಗೆಗಳ್ಳರನ್ನು ಹಿಡಿದು ಸರಕಾರ ತನ್ನ ಹತೋಟಿಯಲ್ಲಿ ಇಟ್ಟುಕೊಂಡು ಸರಕಾರಕ್ಕೆ ಬರಬೇಕಾದ ಆದಾಯವನ್ನು ಸರಿಯಾದ ರೀತಿಯಲ್ಲಿ ಪಡೆದುಕೊಳ್ಳುವುದು ಒಳ್ಳೆಯದೆಂದು ನಾನು ಭಾವಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸಂತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ವಿಧೇಯಕದ ಮೇಲೆ ಸಾಮಾನ್ಯವಾದಂಥ ಅಭಿಪ್ರಾಯಗಳನ್ನು ಮತ್ತೆ ಮತ್ತೆ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮನರಂಜನಾ ತೆರಿಗೆಯನ್ನು ಜಾಸ್ತಿ ಹಾಕಬೇಡಿ, ಇದರಿಂದ ಬಡವರಿಗೆ ತೊಂದರೆಯಾಗುತ್ತದೆಯೆಂದು ವೆಂಕಟರಾಮಯ್ಯನವರು ಹೇಳಂತ್ತಾರೆ. ಮಾನ್ಯ ವೆಂಕಟರಾಮಯ್ಯನವರ ಒಂದು ರಾಜಕೀಯ ತತ್ವ ಏನೆಂದರೆ ತೆರಿಗೆಯನ್ನು ನೀವು ಯಾವುದೂ ಜಾಸ್ತಿ ಮಾಡಬೇಡಿ, ಅವರು ಕೇಳುವಂಥದ್ದೆಲ್ಲಾ ಕೊಡುತ್ತಾ ಇರಿ ಎಂದು ಹೇಳುವುದು ಅವರ ತತ್ವ. ಆಡಳಿತ ನಡೆಸತಕ್ಕಂಥ ಯಾವ ಸರ್ಕಾರವೇ ಆಗಲಿ, ಯಾವ ಪಕ್ಷಕ್ಕೆ ಸೇರಿರಲಿ, ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೋಸ್ಕರವಾಗಿ ಮತ್ತೆ ನನಗೆ ಕ್ಲಾರಿಫಿಕೇಷನ್ ಕೇಳದೇ ಇರಲಿ ಎಂದು ಈ ಮಾತನ್ನು ಹೇಳುತ್ತಿದ್ದೇನೆ. ಸನ್ಮಾನ್ಯ ಮೊಯಿಲಿಯವರು ಇದನ್ನು ವಾಪಸ್ಸು ತೆಗೆದುಕೊಳ್ಳಿ, ಥಿಯೇಟರಿನವರಿಗೆ ಕೊಡಲಪೆಟ್ಟು ಹಾಕಿದ್ದೀರಿ. ಬಹಳ ಜಾಸ್ತಿ ಎಂದು ಹೇಳಿದ್ದಾರೆ. ಎರಡು ಮೂರು ಅಭಿಪ್ರಾಯವನ್ನು ಪ್ರಸ್ತಾಪ ಮಾಡಿದ್ದಾರೆ. ಚಲನಚಿತ್ರಗಳಿಗೆ ರಿಯಾಯಿತಿಯನ್ನು ಕೊಟ್ಟಿದೆ, ಕೊಟ್ಟಿಲ್ಲ ಎಂದು ಇಲ್ಲ. ಇದೇ ಸದನದಲ್ಲಿ ಅಧ್ಯಾದೇಶವನ್ನು ಕಾನೂನು ಮಾಡತಕ್ಕಂಥ ಸಂದರ್ಭದಲ್ಲಿ ಈ ವರ್ಷ ಡಿಸೆಂಬರ್‌ರವರೆಗೆ ಕನ್ನಡ ಚಿತ್ರಗಳನ್ನು ತಯಾರು ಮಾಡತಕ್ಕಂಥವರಿಗೆ ಅವರ ಪ್ರತಿನಿಧಿಗಳ ಒತ್ತಾಯದ ಮೇಲೆ ಮತ್ತು ಅವರು ಹೇಳಿದ ರೀತಿಯಲ್ಲಿ ಸರ್ಕಾರ ಒಪ್ಪಿಕೊಂಡು ಅವರಿಗೆ ಅನುಕೂಲಗಳನ್ನು ಮಾಡಿಕೊಟ್ಟಿದೆ ಚಿತ್ರಮಂದಿರಗಳನ್ನು ಒಡೆಯುತ್ತಿದ್ದಾರೆ ಎಂದು ಹೇಳಿದ್ದಾರೆ ನಿಜ. ಸರ್ಕಾರ ಇದರ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ. ಆರ್ಟಿಕಲ್ ೧೯ ಇರುವವರೆಗೂ ಇದನ್ನು ಮಾಡಬೇಡಿ. ಕನ್ನಡ ಚಿತ್ರೋದ್ಯಮಕ್ಕೆ ಸಹಾಯ, ಬೆಂಬಲ ಕೊಡಿ ಎಂದು ಹೇಳಬಹುದು. ಆದರೆ ವೆಂಕಟರಾಮಯ್ಯನವರು ಲಾಯರು, ನಾನು ಲಾಯರು, ಆರ್ಟಿಕಲ್ ೧೯ರ ಪ್ರಕಾರ 'ಬಿಸಿನೆಸ್' ಎನ್ನುವ ಶಬ್ದವನ್ನು ಉಪಯೋಗಿಸಿದ್ದಾರೆ. ಇದರ ಬಗ್ಗೆ ನೂರಾರು ನಿರ್ಣಯಗಳು ಬಂದಿವೆ. ನಾವು ಸಾರ್ವಜನಿಕರ ಮೇಲೆ ಒತ್ತಾಯ ತಂದು ಸರ್ಕಾರ ಅದಕ್ಕೆ ಸಂಪೂರ್ಣವಾಗಿ ಬೆಂಬಲ ಕೊಡುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಟಿ.ವಿ. ಪ್ರಭಾವದಿಂದ ಸಿನಿಮಾ ಕೈಗಾರಿಕೆಯ ಮೇಲೆ ಪರಿಣಾಮವಾಗಿದೆ. ಆದರಲ್ಲಿ ಸಂಶಯ ಯಾರೂ ಇಟ್ಟುಕೊಳ್ಳಬೇಕಾಗಿಲ್ಲ. ಈ ವಿಡಿಯೋ ಮತ್ತು ಟಿ. ವಿ. ಇವೆರಡರಿಂದಲೂ ಪರಿಣಾಮವಾಗಿದೆ. ಇದನ್ನು ಮಧ್ಯಮ ವರ್ಗದವರು, ಸಾಹುಕಾರರು ಮಾತ್ರ ಉಪಯೋಗಿಸುತ್ತಿದ್ದಾರೆ ಎಂದು ನನಗೆ ಅನಿಸುವುದಿಲ್ಲ. ನಮ್ಮ ರಾಜ್ಯದ ಅನೇಕ ಕಡೆ ಹೋದಾಗ ಸಾಮಾನ್ಯವಾಗಿ ದೊಡ್ಡ ದೊಡ್ಡ ಹಳ್ಳಿಗಳಿಂದಲೂ ಕೂಡಾ ಈ ವಿಡಿಯೋವನ್ನು ನಿಲ್ಲಿಸಿ, ನಮ್ಮ ಹುಡುಗರು ಕೆಟ್ಟುಹೋಗಿಬಿಟ್ಟಿದ್ದಾರೆ. ನಮ್ಮ ಕೈಗೇ ಸಿಗುವುದಿಲ್ಲ, ಅಲ್ಲಿಗೆ ಹೋಗಿ ಕಂಳಿತುಂಕೊಂಡಿರುತ್ತಾರೆ, ಸರಿಯಾಗಿ ಸ್ಕೂಲ್‌ಗೇ ಹೋಗುವುದಿಲ್ಲ, ಕಾಲೇಜಿಗೆ ಹೋಗುವುದಿಲ್ಲ, ನಮಗೂ ಸುಳ್ಳು ಹೇಳಿ ಅಲ್ಲಿ ಹೋಗಿದ್ದೆವು ಇಲ್ಲಿ ಹೋಗಿದ್ದೆವು ಎಂದು ಹೇಳುತ್ತಾರೆ ಎಂದು ಈ ಒಂದು ಅಪಾದನೆ ಕೂಡ ನಮಗೆ ಬಂದಿದೆ. ಇದೂ ಒಂದು. ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥವರು ಇರಬಹುದು. ಸಿನಿಮಾ ಉದ್ಯಮದಲ್ಲಿ ಇರತಕ್ಕಂಥ ನಟರಾಗಬಹುದು, ಸಿನಿಮಾ ಚಿತ್ರಗಳನ್ನು ಮಾಡತಕ್ಕಂಥ ಜನರು ಆಗಬಹುದು. ಅವರು ನನ್ನನ್ನು ಒಂದು ಸಭೆಗೆ ಕರೆದರು. ಅಲ್ಲಿ ಅವರು ಹೇಳಿದ್ದೆನೆಂದರೆ ಏನಾದರೂ ಮಾಡಿ ಈ ವಿಡಿಯೋವನ್ನು ನಿಲ್ಲಿಸಿಬಿಡಿ ಎಂದು, ವಿಡಿಯೋವನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ವಿಡಿಯೋ ಚಿತ್ರವನ್ನೇ ತೆಗೆದುಬಿಟ್ಟರೆ ಅದು ಬೇರೆ ವಿಚಾರ. ಈ ಕಾನೂನು ಸಂವಿಧಾನವಾಗಿ ಇರುವವರೆಗೆ ಇದನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಏತನ್ಮಧ್ಯೆ ತೊಂದರೆಯಂತೂ ಸಿನಿಮಾ ಇಂಡಸ್ಟ್ರೀಗೆ ತಪ್ಪಲಿಲ್ಲ ಎಂಬ ಕಾರಣದಿಂದ ನನಗೆ ನಿಬಂಧನೆ ಮಾಡತಕ್ಕಂಥ ವಿಷಯಗಳನ್ನು ಡಿಸ್ಕರೇಜ್ ಮಾಡುವ ದೃಷ್ಟಿಯಿಂದ ಮಾಡಿದ್ದೇವೆ. ಸನ್ಮಾನ್ಯ ಕೃಷ್ಣನ್‌ರವರು ಹೇಳಿದರು, ಜಾಸ್ತಿ ಮಾಡಿದ್ದೀರಿ ಎಂದು. ಮತ್ತು

ವಿಡಿಯೋ ಹೆಚ್ಚಿಸುವುದಕ್ಕೆ ಕಾರಣ ಹೇಳಲಿಲ್ಲ ಎಂದು ಹೇಳಿದರು. ಎಲ್ಲದಕ್ಕೂ ಕಾರಣ ಹೇಳುವುದಕ್ಕೆ ಆಗುವುದಿಲ್ಲ. ಜಾಸ್ತಿ ಮಾಡಿದ್ದೇವೆ. ಡಿಸ್ಕ್ರೇಜ್ ಮಾಡಬೇಕು ಎಂದು ಹೆಚ್ಚು ತೆರಿಗೆಯನ್ನು ಹಾಕಿದ್ದೇವೆ. ಮನೆ ಮನೆಯಲ್ಲೂ ವಿಡಿಯೋ ಇಟ್ಟುಕೊಂಡಿದ್ದಾರೆ. ಅನೇಕ ವರ್ಷಗಳಿಂದ ನಾನು ಗಾಂಧಿನಗರದಲ್ಲಿ ಇದ್ದೇನೆ ರಾತ್ರಿ ಎರಡು ಗಂಟೆಯವರೆಗೂ ವಿಡಿಯೋವನ್ನು ಹಾಕುತ್ತಾರೆ, ಏನು ಮಾಡಿದರೂ ನಿಲ್ಲಿಸುವುದಿಲ್ಲ ಎಂದು ಹೇಳಿ ಪ್ರತಿದಿನ ನನಗೆ ಕಂಪ್ಲೇಂಟ್ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜಾಜಿನಗರದಲ್ಲಿ ರಸ್ತೆಯಲ್ಲೇ ಬ್ಲೂಫಿಲಂನ್ನು ತೋರಿಸುತ್ತಾರೆ.

ಶ್ರೀ. ಎ. ಲಕ್ಷ್ಮೀಸಾಗರ್.—ಸ್ವಲ್ಪ ದುಬಾರಿ ಎಂದು ಹೇಳಿದ್ದೀರಿ. ಆದರೂ ನೋಡೋಣ. ದುಬಾರಿ ಆದರೆ ಮುಂದಿನ ವರ್ಷ ಸರಿ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಸ್ವಲ್ಪ Modulation ನನ್ನ ಮಾತಿನಲ್ಲಿ ಇದೆ.

SRI M. S. KRISHNAN.—I know you are not for blue films. ನೀವು ಯಾವುದು ನೋಡುವುದಿಲ್ಲ, ನಿಮಗೆ ನೋಡುವ ಹವ್ಯಾಸವೂ ಇಲ್ಲ. ರಾಜಾಜಿನಗರದಲ್ಲಿ ಸಂಪಾರು ಬ್ಲೂಫಿಲಂನ್ನು ತೋರಿಸುತ್ತಾರೆ.

ಶ್ರೀ. ಎ. ಲಕ್ಷ್ಮೀಸಾಗರ್.—ಇದು ರಾಜಾಜಿನಗರಕ್ಕೆ ಹೋಗಿರುವುದು ಚಿಕ್ಕಪೇಟೆ ಕ್ಷೇತ್ರದಿಂದ, ಇದು ಉಗವು ಸ್ಥಾನ. ಮ್ಯಾನುಫ್ಯಾಕ್ಚರ್ ಬೇರೆ ಕಡೆ ಆಗುತ್ತದೆ. ನಿಯಂತ್ರಣ ಮಾಡುವುದಕ್ಕೆ ಇದೊಂದು ದಾರಿ ಎಂದು ನಾನು ಅಂದುಕೊಂಡಿದ್ದೇನೆ. ತೆರಿಗೆ ವಿಧೇಯಕಗಳಲ್ಲಿ ಇವೇಷನ್ ನಡೆಯಬಾರದು ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ವಸ್ತು ಪರಿಸ್ಥಿತಿ ವಿಷಯ ಸನ್ಮಾನ್ಯ ಕೃಷ್ಣನ್‌ರವರು ಈ ಫೈನಾನ್ಸ್ ಡಿಪಾರ್ಟ್‌ಮೆಂಟಿನವರಿಗೆ ಕೊಟ್ಟಿರತಕ್ಕಂಥದ್ದನ್ನು ೧೯೮೧-೮೨ ರಿಂದ, ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ೧೯೮೪-೮೫, ೧೯೮೫-೮೬ರಲ್ಲಿ ಸ್ವಲ್ಪ ಜಾಸ್ತಿ ಬ್ಯಾಲೆನ್ಸ್ ಉಳಿದಿದೆ, ಅದನ್ನು ವಸೂಲು ಮಾಡಬೇಕು ಎಂದು ಹೇಳಿದ್ದಾರೆ. ನಾನು ಅವರ ವಾದವನ್ನು ಒಪ್ಪುತ್ತೇನೆ. ಖಂಡಿತವಾಗಿ ಅದನ್ನು ಮಾಡುತ್ತೇನೆ ಎಂದು ಹೇಳಂತ್ತೇನೆ. ೧೯೮೬-೮೭ರಲ್ಲಿ ಉದ್ದೇಶಿತ ನಮಗೆ ಬರತಕ್ಕಂಥ ತೆರಿಗೆ ಈ ಬಾಬತ್ತಿನಿಂದ ೩೩ ಕೋಟಿ ರೂಪಾಯಿ. ಈಗಾಗಲೇ ೨೪-೨೫ ಕೋಟಿ ರೂಪಾಯಿಯಂನ್ನು ವಸೂಲು ಮಾಡಿದ್ದೇವೆ. ಇನ್ನು ಮೂರು ತಿಂಗಳಲ್ಲಿ ಎಲ್ಲಾ ವಸೂಲು ಆಗುತ್ತದೆ. ಒಂದೊಂದು ಸಲ ವರ್ಷದ ಕೊನೆಯ ಮೂರು ತಿಂಗಳಲ್ಲಿ ಜಾಸ್ತಿ ತೆರಿಗೆ ಬರುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಈ ತೆರಿಗೆಯನ್ನು ವಸೂಲು ಮಾಡುತ್ತೇವೆಂದು ನನಗೆ ಭರವಸೆ ಇದೆ. ಈ ತೆರಿಗೆಯನ್ನು ವಸೂಲು ಮಾಡುತ್ತಿದ್ದೇವೆ. ಇದಾದಮೇಲೆ

> "During 1986–87 (April to December, 1986), inspection of 580 cinema theatres was conducted by the Mobile Squads of Intelligence Wing (South Zone) of the Department and offences were booked in 246 cases and an amount of Rs. 2.31 lakhs was collected as compounding fees."

ಮಾಡುತ್ತಿದ್ದೇವೆ. ಇನ್ನು ಹೆಚ್ಚಿನ ರೀತಿಯಲ್ಲಿ ಈ ಕೆಲಸವನ್ನು ಮಾಡಿ ತೆರಿಗೆಯನ್ನು ವಂಚನೆ ಮಾಡತಕ್ಕಂಥವರ ಮೇಲೆ ಕ್ರಮ ತೆಗೆದುಕೊಂಡು ವಸೂಲ್ಮಾಡಬೇಕೆಂದು ಇಲಾಖೆಯವರಿಗೆ ನಿರ್ದೇಶನ ಕೊಡುತ್ತಿದ್ದೇನೆ. ಸರ್ಕಾರ ಅನೇಕ ವಿಧವಾದಂಥ ಜನ ಕಲ್ಯಾಣಕ್ಕೆ ಹೊಂದಾಣಿಕೆಯಾಗುವಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದರಿಂದ, ಈ ಕೆಲಸಕ್ಕಾಗಿ ಹಣಬೇಕಾಗಿರುವುದರಿಂದ ಸಮಾಜದ ಎಲ್ಲಾ ವರ್ಗದವರು ಅವರವರ ಶಕ್ತಿಗನುಸಾರವಾಗಿ ತೆರಿಗೆಗಳ ಮುಖಾಂತರ ಹಣವನ್ನು ಕೊಡಬೇಕಾದ ಕಾರಣ ಈ ಮನರಂಜನೆ ತೆರಿಗೆಯನ್ನು ಸ್ವಲ್ಪ ಹೆಚ್ಚು ಮಾಡಿದ್ದೇವೆ. ಸನ್ಮಾನ್ಯ ಸಭೆಯು ೧೯೮೭ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕಕ್ಕೆ ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೭ರ ಕರ್ನಾಟಕ ಮನೋರಂಜನ ತೆರಿಗೆ (೨ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಂಕವನ್ನು ಪರ್ಯಾಲೋಚಿಸುವುದು
ಖಂಡ ೨ ರಿಂದ ೪ರವರೆಗೆ

ಅಧ್ಯಕ್ಷರು.—ಖಂಡ ೨ ರಿಂದ೪ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಂಕದ ಆಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೪ರ ವರೆಗೆ ಎರಡು ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗಳಿಸುವ ಸೂತ್ರಸಂಹಿತೆಗಳು ವಿಧೇಯಕದ ಭಾಗವಾಗಿರುತ್ತವೆ.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ ೧೯೮೭ರ ಕರ್ನಾಟಕ ಮನರಂಜನಾ ತೆರಿಗೆಯ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೮೭ರ ಕರ್ನಾಟಕ ಮನರಂಜನಾ ತೆರಿಗೆ ೧೨ನೇ ತಿದ್ದುಪಡಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

೧೯೮೭ರ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಂಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನೆ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಂಬುಗಳು ಮತ್ತು ಉದ್ಯೋಗಗಳು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಸಂಬಳದ ಬಗ್ಗೆ ಪ್ರಸ್ತಾಪ ಇದೆ. ೧೫೦೦ ರೂ.ಗಳಿಂದ ೨೦೦೦ ರೂ.ವರೆಗೆ ಮಂತ್ರಿ ಆದಕ್ಕೆ ಮೇಲ್ಪಟ್ಟ ಆದಾಯ ಬರತಕ್ಕಂಥವರಿಗೆ ಈ ವೃತ್ತಿ ತೆರಿಗೆಯನ್ನು.....

ಶ್ರೀ ಎಂ ಎಸ್. ಕೃಷ್ಣನ್.—ಅಧ್ಯಕ್ಷರೆ, ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಬಿಲ್ ಏನಿದೆ ಈ ಬಿಲ್ ತಾವು ನೋಡಿದರೆ ಇವತ್ತು ಮನರಂಜನ ತೆರಿಗೆಯ ಅನುಬಂಧದ...

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಲ್ಪ ಮಿಸ್ಟೇಕ್ ಇದೆ.